‘ಪ್ರಮದ’, ‘ಸುದ್ದಿಕಾವ್ಯ’, ‘ಕಾಲ’, ‘ಶಂಕರದೇವ’, ‘ಪ್ರಣವ’ ಕೃತಿಗಳನ್ನು ರಚಿಸಿರುವ ವಸಂತ ಕಲ್‌ಬಾಗಲ್ ಮೈಸೂರಿನವರು. ಪತ್ರಿಕೋದ್ಯಮ ಕ್ಷೇತ್ರದಲ್ಲಿಯೂ ದುಡಿದವರು. ರೋಟರಿ ಸಂಸ್ಥೆಯಲ್ಲಿ ಸಕ್ರಿಯ ಸದಸ್ಯೆ. ಕಥೆ, ಕವನ ಮತ್ತು ಪ್ರಬಂಧಗಳನ್ನು ಬರೆಯುವುದು ಅವರ ಪ್ರೀತಿಯ ಹವ್ಯಾಸ.

ಇಚ್ಛೆಯಿಂದ ಬಂದವರು ಇಲ್ಲಿ ಹದಿನೈದು ದಿನ ಉಳಿದುಕೊಳ್ಳಬಹುದು. ಬಂದ ಕಾರ್ಯಸಿದ್ಧಿ ಆಗದಿದ್ದಲ್ಲಿ ಸ್ಥಳವನ್ನು ತೆರವು ಮಾಡಬೇಕು. ಜೊತೆಗಿರುವ ಸಂಬಂಧಿಕರ ದಿನದ ವೆಚ್ಚ ಇಪ್ಪತ್ತು ರೂಪಾಯಿ’ ಎಂದು ಸಹಿ ಹಾಕಿಸಿಕೊಂಡರು. ‘ಕಾರ್ಯ ಸಿದ್ಧಿ’ ಎಂಬ ಪದದ ಅರ್ಥವಾಗದಿದ್ದರೂ ಹದಿನೈದು ದಿನ ಇಲ್ಲಿಯ ವಾಸ ಎಂಬುದಷ್ಟು ಮನವರಿಕೆ ಆಯಿತು. ತಾತನ ದೆಸೆಯಿಂದ ಕಾಶಿಯನ್ನು ಕಣ್ತುಂಬ ನೋಡಬಹುದೆಂದು ಹಿಗ್ಗಿದೆ.

ಇದೊಂದು ಹಳೆಯ ಆಶ್ರಮವಾದರೂ ಸ್ವಚ್ಛವಾಗಿತ್ತು. ಒಂದು ಕೋಣೆಯಲ್ಲಿ ಎರಡು ಮಂಚಗಳು. ಅಗತ್ಯವಿದ್ದರೆ ಹಾಸಿಗೆ, ಹೊದಿಕೆ, ದಿಂಬು ಇತ್ಯಾದಿ ಕೊಡುತ್ತಾರೆ. ಕೆಲವು ಹಣ್ಣು ಹಣ್ಣು ಮುದುಕ ಮುದುಕಿಯರು ಮರದ ಹಲಗೆಯ ಮಂಚಗಳ ಮೇಲೆ ಮಲಗಿದ್ದರು. ವೃದ್ಧಾಶ್ರಮವಿರಬೇಕು ಎನಿಸಿತು. ನಾನು ‘ಮೊಮ್ಮಗನಾದೆ’ ಎನ್ನುವ ಸುದ್ದಿಯನ್ನು ಹಾಗೂ ಕಾಶಿಗೆ ಬಂದಿರುವುದನ್ನು ಅಮ್ಮನಿಗೆ ಫೋನ್‌ನಲ್ಲಿ ತಿಳಿಸಿದೆ. ‘ಎಚ್ಚರ ಮಗ, ಗಂಗೆಯಲ್ಲಿ ಮುಳುಗು ಹಾಕುವಾಗ ಜಾಗ್ರತೆ’ ಎಂದರು. ಜೊತೆಗೆ ‘ನಮ್ಮಂಥಹವರು ಯಾರ್‍ಯಾರ ಋಣ ಎಲ್ಲೆಲ್ಲಿ ತೀರಿಸಬೇಕೋ ಅವರೆಲ್ಲಾ ಎಲ್ಲೆಲ್ಲಿ ಇದ್ದರೋ ತಿಳಿಯದಲ್ಲಾ ಮಗ’ ಎಂದಳು. ತಾತನ ಮಗನ ಫೋನ್ ಬಂದಿತು. ತಾತ ಮಾತನಾಡುತ್ತಾ ‘ಬಿಬಿಎಂ ಮಂಜು ಇದ್ದಾನಪ್ಪಾ. ಎಲ್ಲಾ ನೋಡಿಕೊಳ್ಳುತ್ತಾನೆ. ಕಾಶಿಗೆ ಬರುವ ಮನಸ್ಸಾಯಿತು. ಇಟ್ ಐಸ್ ಮೈ ವಿಶ್. ಟೇಕ್ ಕೇರ್ ಆಫ್ ದಿಸ್ ಬಾಯ್ ಹೂ ಐಸ್ ಟೇಕಿಂಗ್ ವೆರಿ ಗುಡ್ ಕೇರ್ ಆಫ್ ಮೀ. ಡೋಂಟ್ ವರಿ’ ಎಂದು ಹೇಳಿ ಫೋನನ್ನು ನನಗೇ ಕೊಟ್ಟುಬಿಟ್ಟರು. ಮಗನೊಂದಿಗೆ ತಾತ ಯಾವಾಗಲೂ ಇಂಗ್ಲಿಷ್‌ನಲ್ಲೇ ಮಾತನಾಡಬೇಕು. ‘ಏನಾದರೂ ಬೇಕಾದರೆ ರಮೇಶ್‌ಗೆ ಫೋನ್ ಮಾಡು’ ಎಂದು ಹೇಳಿ ರಘು ಸರ್ ಫೋನಿಟ್ಟರು.

ಅಂದು ಸಂಜೆ ಯಾರೋ ಸಂತರು ಭಗವದ್ಗೀತೆಯ ಪ್ರವಚನವನ್ನು ಆಶ್ರಮದ ಅಂಗಳದಲ್ಲೇ ಮಾಡುತ್ತಿದ್ದರು. ಸಂತರು ಎಳೆ ಎಳೆಯಾಗಿ ಬಿಡಿಸಿ ಅರ್ಥವಾಗುವಂತೆ ಹೇಳುತ್ತಿದ್ದರು. ತಾತ ನನ್ನನ್ನು ಹತ್ತಿರಕ್ಕೆ ಕರೆದು, ‘ಆಫೀಸಿನಲ್ಲಿ ಖಾಲಿ ಹಾಳೆಗಳನ್ನು ತೆಗೆದುಕೊಂಡು ಬಾ. ಸಂತರು ಹೇಳುವುದನ್ನು ಸ್ಫುಟವಾಗಿ ಬರೆದು ನನಗೆ ನಾಳೆ ಓದು. ನಂತರ, ಬರೆದದ್ದನ್ನು ಜೋಪಾನವಾಗಿ ಬ್ಯಾಗ್‌ನಲ್ಲಿ ಇಟ್ಟು ನನ್ನ ಮಗ ರಘುವಿಗೆ ಕೊಟ್ಟು ನಾನು ಓದಲು ಹೇಳಿದೆನೆಂದು ಹೇಳು, ನಾನೀಗ ಮಲಗುತ್ತೇನೆ’ ಎಂದು ತಾತ ಕರಾರುವಾಕ್ಕಾಗಿ ಹೇಳಿದರು. ತಾತ ಹೇಳಿದ್ದನ್ನು ಪಾಲಿಸಿದೆ.

ವಿದ್ವಾಂಸರೊಬ್ಬರ ಒಂದೊಂದು ಮಾತನ್ನೂ ಗಮನವಿಟ್ಟು ಕೇಳಿಸಿಕೊಳ್ಳಲಾರಂಭಿಸಿದೆ. ನನಗರಿವಿಲ್ಲದೆಯೇ ನನ್ನ ಬೆರಳುಗಳು ಕಾಲೇಜಿನ ಉಪನ್ಯಾಸದಲ್ಲಿ ಕುಳಿತಂತೆ ತಂತಾನೇ ಬರೆದುಕೊಳ್ಳಲಾರಂಭಿಸಿದವು. ಅದರ ಒಕ್ಕಣೆ ಹೀಗಿತ್ತು-

“ನಮ್ಮಲ್ಲಿ ಒಂದು ಹಳೆಯ ತಕರಾರುಂಟು. ಜ್ಞಾನದಿಂದ ಭಕ್ತಿಯೋ, ಭಕ್ತಿಯಿಂದ ಜ್ಞಾನವೋ ಎಂಬುದು ಬರಿಯ ದೊಂಬರಾಟವೆನಿಸುತ್ತದೆ. ವಾಸ್ತವವಾಗಿ, ವಿಷಯಜ್ಞಾನ ಪರಿಪೂರ್ಣತೆಯಿಂದ ಆ ವಿಷಯದಲ್ಲಿ ಪ್ರೀತಿ ಬೆಳೆಯುವುದೂ ಉಂಟು. ಪ್ರೀತಿ ಹೆಚ್ಚಿದಂತೆಲ್ಲಾ ಜ್ಞಾನ ಲಾಭ ಹೆಚ್ಚುವುದುಂಟು. ರಾಕ್ಷಸೀ ಮಾರ್ಗದ ಶಕ್ತಿಗಳು ಮೋಹ ಭ್ರಮೆಗಳನ್ನು ಒಡ್ಡಿ, ಮನುಷ್ಯ ತನ್ನನ್ನು ತಾನು ಮರೆತುಕೊಳ್ಳುವಂತೆ ‘ಮತ್ತು’ ಹಿಡಿಸುತ್ತಾನೆ. ಆ ‘ಮತ್ತಿ’ನಿಂದ ಎಚ್ಚರ ತಪ್ಪುತ್ತದೆ. ಸ್ವಾತಂತ್ರ್ಯ ಇದ್ದೂ ಅದು ಉಪಯೋಗಕ್ಕೆ ಬಾರದೆ ಹೋಗುತ್ತದೆ, ಅನರ್ಥವನ್ನೇ ತರುತ್ತದೆ. ಜಾಗರೂಕನಿಗೆ ಸ್ವಾತಂತ್ರ್ಯ. ಹಿತಾಹಿತ ವಿವೇಕಕ್ಕಾಗಿ ಆ ಸ್ವಾತಂತ್ರ್ಯ”.

ವಸ್ತು ಸ್ವರೂಪವನ್ನು ಸಂಪಾದಿಸುವುದು ಬುದ್ಧಿ. ಬುದ್ಧಿ ಹಸಿವು. ಬುದ್ಧಿ ಯೋಗವಲ್ಲ. ಬುದ್ಧಿಯು ಪರವಸ್ತುವನ್ನು ಕಾಣಬೇಕೆಂದಾಗ ಅದಕ್ಕೆ ದಾರಿ ತೋರಲು ಎದುರುಗಡೆಯಿಂದಲೇ ಬೆಳಕು ಬರಬೇಕು, ಆ ದೀಪಾನುಗ್ರಹವೇ ‘ಇನ್‌ಸ್ಪಿರೇಷನ್’ ‘ಅಂತಃಸ್ಫೂರ್ತಿ’ ‘ರೇವೆಲೇಷನ್’– ಅಪೌರುಷೇಯ ವಾಕ್ಕು . “ವಿಷನ್” ದಿವ್ಯದರ್ಶನ ಎನ್ನುತ್ತಾರೆ. ‘ನ ತ್ವಹಂ ತೇಷು -ತೇ ಮಮಿ’